# ಭೂಮಿಗೆ ಅರ್ಧ ಬೆಳದಿಂಗಳು

**ಶರಣಬಸವ ಕೆ. ಗುಡದಿನ್ನಿ**

ಕಲೆ: ಎಸ್.ವಿ. ಹೂಗಾರ



“ರಾಘ್ಯಾಗ ಯಲ್ಲಮ್ಮನ ಪಾದ ಕಟ್ಟಿ ಜೋಗಮ್ಮನ ಮಾಡಿ ಊರ ತುಂಬಾ ಮೆರಸಾಕತ್ಯಾರಂತ” ಅಂಬೊ ಮಾತು ಕೇಳಿ ಮನೆಯ ಮೇಲಿನ ಕೊಠಡಿಯಲ್ಲಿ ಕೂತು ಗದ್ದೆಗೆ ಹಾಕಿದ ಗೊಬ್ಬರ, ಎಣ್ಣೆಗಳ ಲೆಕ್ಕ ಬರೆಯುತ್ತಿದ್ದ ವಾದಿ ಸೊಂಡಾರಿ ಅಗಸೀಮುಂದೆ ಬಂದ. ಧಣಿಯ ಮಗ ಬಂದದ್ದು ನೋಡಿ ಜನ ಸರಿದು ನಿಂತು ಜಾಗ ಮಾಡಿಕೊಟ್ಟರು.

ಇಡೀ ಊರಿಗೆ ಊರೇ ಅಲ್ಲಿತ್ತು!

ದೊಡ್ಡವರು, ಸಣ್ಣವರು, ಮುದುಕರು, ಕೊನೆಗೆ ಸಾಲಿಗೆ ಹೋಗುವ ಮಕ್ಕಳು ಕೂಡ ಮಣಬಾರದ ಬ್ಯಾಗನ್ನ ಹೊತ್ತುಕೊಂಡು ಕಣ್ಗಳಲ್ಲಿ ಕುತೂಹಲ ತುಂಬಿಕೊಂಡು ಮೈಮರೆತು ನೋಡಲು ನಿಂತಿದ್ದರು.

ಹಸಿರು ಬಣ್ಣದ ಮಡಿಸೀರೆ, ಅದಕೊಪ್ಪುವ ಗಿಳಿ ಹಸಿರು ಬಣ್ಣದ ಬ್ಲೌಸು ತೊಟ್ಟ ರಾಘು ಮೊದಲ ನೋಟಕ್ಕೆ ಗುರುತು ಸಿಗದಷ್ಟು ಚಂದ ಕಾಣುತ್ತಿದ್ದ. ಮೂಗಿನ ಕೆಳಗಿನ ಮೀಸೆಗಳನ್ನ ನುಣ್ಣಗೆ ಮಾಡಿಕೊಂಡಿದ್ದ!

ಮೊದಲಾದರೂ ಗಡ್ಡ ಮೀಸೆ ಬೆಳೆಯಲು ಅವನೆಲ್ಲಿ ಬಿಡುತ್ತಿದ್ದ!?

ಗದ್ದೆಯೊಳಗೆ ಚೂರು ಕಸ, ಕಳೆ ಎದ್ದರೆ ಕಂಗಲಾಗುವ ಬೇಸಾಯಗಾರನಂತೆ ತಕ್ಷಣ ಮೀಸೆ, ದಾಡಿಗೆ ಕತ್ತಿ ಹಾಕಿ ನುಣ್ಣಗೆ